ಅ) 1) ಹೌದು

2) ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಪಶುವೈದ್ಯಾಧಿಕರಿಗಳ ಸೇವೆಯನ್ನು ಸಕ್ರಮಗೊಳಿಸಲು ಸರ್ಕಾರ ತೀರ್ಮಾನಿಸಿದ ಕಾರಣ.

ಇ) 1) ಹೌದು.

2) 200 ಹುದ್ದೆಗಳನ್ನು ಹೊರತುಪಡಿಸಿ ಯಾವುದೇ ಹುದ್ದೆಗಳು ಖಾಲಿ ಇರುವುದಿಲ್ಲ.

ಈ) 1) 204 ಪಶುವೈದ್ಯಾಧಿಕಾರಿಗಳ ಹುದ್ದೆ ಖಾಲಿ ಇದೆ.

2) 378 ನಿರುದ್ಯೋಗಿ ಪಶುವೈದ್ಯಾಧಿಕಾರಿಗಳಿರುತ್ತಾರೆ.

ಉ) 1) ಬಂದಿದೆ

2) ಇಲಾಖೆಯಲ್ಲಿ ಖಾಲಿಯಾಗಿರುವ ಪಶುವೈದ್ಯಾಧಿಕಾರಿ ಹುದ್ದೆಗಳಿಗೆ ನಿಯಮಾನುಸಾರ ನಿರುದ್ಯೋಗಿ ಪಶುವೈದ್ಯಾಧಿಕಾರಿಗಳಿಂದ ಭರ್ತಿ ಮಾಡಲಾಗುವುದು.

ಮೈಸೂರಿನಲ್ಲಿರುವ ರಂಗಾಯಣ ಕುರಿತು

992 - ಶ್ರೀ ಆಯನೂರು ಮಂಜುನಾಥ್ (ಹೊಸನಗರ) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರಿನಲ್ಲಿರುವ ರಂಗಾಯಣ ಸರ್ಕಾರದಿಂದ ರಚಿತವಾದ ಸಂಸ್ಥೆಯೇ? ಇದರಲ್ಲಿ ಎಷ್ಟು ಜನ ಕಲಾವಿದರು ಹಾಗೂ ನೌಕರರು ಇದ್ದಾರೆ? ಯಾವ ಉದ್ದೇಶಕ್ಕೆ ಸ್ಥಾಪನೆ ಮಾಡಲಾಗಿದೆ?

ಆ) ಸರ್ಕಾರದಿಂದ ಅನುದಾನ ನೀಡಲಾಗುತ್ತಿದೆಯೇ? ಹಾಗಾದಲ್ಲಿ ವಾರ್ಷಿಕ ಎಷ್ಟು ಅನುದಾನ ನೀಡಲಾಗುತ್ತಿದೆ? ಮಾನದಂಡವೇನು?

ಇ) ರಂಗಾಯಣದ ಕಲಾವಿದರನ್ನು ಯಾವ ರೀತಿ ಬಳಸಿಕೊಳ್ಳಲಾಗುತ್ತಿದೆ? ಈ ಕಲಾವಿದರನ್ನು ಎಲ್ಲಾ ಜಿಲ್ಲಾ ಕೇಂದ್ರಗಳಿಗೆ ನೇಮಿಸುವ ಆಲೋಚನೆ ಸರ್ಕಾರಕ್ಕೆ ಇದೆಯೇ? ಹಾಗಿದ್ದಲ್ಲಿ ರೂಪರೇಷೆಗಳೇನು?

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಹಾಗೂ ಸಂಸ್ಕೃತಿ ರಾಜ್ಯ ಸಚಿವರು):

ಅ) 1) ಹೌದು

2) 23 ಜನ ಕಲಾವಿದರು

3) 16 ನೌಕರರು

4) ಕನ್ನಡ ರಂಗಭೂಮಿಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಉನ್ನತ ಮಾದರಿಯಾಗುವಂತೆ ರೂಪಿಸಲು ಮತ್ತು ರಂಗಾಯಣವನ್ನು ರಾಜ್ಯಮಟ್ಟದ ಪ್ರಾತಿನಿಧಿಕ ರೆಪರ್ಟರಿಯನ್ನಾಗಿ ಮಾಡುವ ಉದ್ದೇಶದಿಂದ ಸ್ಥಾಪಿಸಲಾಗಿದೆ.

ಅ) 1) ಹೌದು

2) 1996-97ನೇ ಸಾಲಿನಲ್ಲಿ ಇದುವರೆವಿಗೂ 31.52ಲಕ್ಷ ರೂ. ಬಿಡುಗಡೆ ಮಾಡಿದೆ.

3) ರಂಗಾಯಣದ ಕಾರ್ಯಚಟುವಟಿಕೆಗಳನ್ನು ಗಣನೆಗೆ ತೆಗೆದುಕೊಂಡು ಅನುದಾನ ನಿಗದಿ ಮಾಡಲಾಗುತ್ತಿದೆ.

ಇ) 1) ರಂಗಾಯಣದಲ್ಲಿ ನಡೆಸುವ ತರಬೇತಿಗಳಲ್ಲಿ ಅಭ್ಯಾಸಿಗಳಾಗಿ ಮತ್ತು ತಯಾರಾಗುವ ನಾಟಕ ಪ್ರದರ್ಶನಗಳಲ್ಲಿ ಕಲಾವಿದರನ್ನಾಗಿ ಬಳಕೆ ಮಾಡಲಾಗುತ್ತಿದೆ.

2) ಹೌದು.

ಸುಳ್ಯ ವಿಧಾನಸಭಾಕ್ಷೇತ್ರದಲ್ಲಿರುವ ಹೊಸಮಠದ ಮುಳುಗು ಸೇತುವೆಯನ್ನಾಗಿ ಪರಿವರ್ತಿಸುವುದು.

996 - ಶ್ರೀ ಎಸ್. ಅಂಗಾರ (ಸುಳ್ಯ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ವಿಧಾನ ಸಭಾ ಕ್ಷೇತ್ರದ ಉಪ್ಪಿನಂಗಡಿ-ಕಡಬ-ಸುಬ್ರಹ್ಮಣ್ಯ ಲೋಕೋಪಯೋಗಿ ರಸ್ತೆಯ ಹೊಸಮಠ ಎಂಬಲ್ಲಿ ಮುಳುಗು ಸೇತುವೆಯನ್ನು ಸರ್ವಋತು ಸೇತುವೆಯನ್ನಾಗಿಸುವ ಪ್ರಸ್ತಾಪ 1997-98ನೇ ಸಾಲಿನಲ್ಲಿ ಸರ್ಕಾರವು ಪರಿಶೀಲಿಸಲು ಆಲೋಚಿಸಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಭಂಟ್ವಾಳ - ಮೈಸೂರು ರಾಜ್ಯ ಹೆದ್ದಾರಿ ಕುರಿತು

997 - ಶ್ರೀ ಎಸ್.ಅಂಗಾರ್ (ಸುಳ್ಯ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ಪಟ್ಟಣವು ದಿನದಿಂದ ದಿನಕ್ಕೆ ಬೆಳೆಯುತ್ತಿದ್ದು, ಭಂಟ್ವಾಳ-ಮೈಸೂರು ರಾಜ್ಯ ಹೆದ್ದಾರಿ ಸುಳ್ಯದ ಮೂಲಕ ಹಾದುಹೋಗುತ್ತಿದ್ದು, ವಾಹನಗಳ ದಟ್ಟಣೆಯಿಂದ ರಸ್ತೆಯು ಆಗಾಗ ಬ್ಲಾಕ್ ಆಗುತ್ತಿದೆ, ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರವು ಬದಲಿ ವ್ಯವಸ್ಥೆಯನ್ನು ಮಾಡುವ ಉದ್ದೇಶ ಹೊಂದಿದೆಯೇ?

ಆ) ಹಾಗಿದ್ದಲ್ಲಿ, ಈ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು?